# ಛಲ ಬೇಕು ಮನುಷ್ಯಂಗೆ...

◆ **ನಿಮ್ಮಲ್ಲಿ ಅಭಿನಯ ಪ್ರತಿಭೆ ಇದೆ ಅಂತ ಮೊಟ್ಟ ಮೊದಲು ನಿಮಗೆ ಅನಿಸಿದ್ದು, ತೋಚಿದ್ದು ನೆನಪಿದೆಯೆ? ನಿಮಗೆ ಬುದ್ಧಿ ಬಂದ ಮೇಲೆ ನಾನೂ ಅಭಿನಯಿಸಬಲ್ಲೆ ಅಂತ ಯಾವಾಗ ಅನಿಸಿತು?**

ನಮ್ಮ ಅಪ್ಪಾಜಿಯವರ ಜೊತೆಯಲ್ಲಿ ಹೆಚ್ಚಿನ ಪಾತ್ರಗಳನ್ನು ಮಾಡಿದವನೇ ಅಲ್ಲ. ಆದರೆ ಗುಬ್ಬಿ ಡ್ರಾಮಾ ಕಂಪನಿಯಲ್ಲಿ, ಅವರು ಸಾಯುವುದಕ್ಕೆ 2-3 ತಿಂಗಳು ಇದೆ ಅನ್ನುವಾಗ, ಚನ್ನಪಟ್ಟಣದಲ್ಲಿ 'ಕುರುಕ್ಷೇತ್ರ' ನಾಟಕ ಆಡುವಾಗ ನಾನು ಅರ್ಜುನನ ಪಾತ್ರವನ್ನು ಮಾಡಬೇಕಾಗಿ ಬಂತು. ಅವರು ಭೀಮ. ನನಗೆ ಏನು ಆಗಿತ್ತು ಎಂದರೆ, ನನಗೆ ಒಳ್ಳೆ ಶಾರೀರ ಇದ್ದರೂ ಇದ್ದಕ್ಕಿದ್ದ ಹಾಗೆ ಒಂದು ತರಹ ವಾಯು ತಿರುಗಿದಂತೆ ಆಗುತ್ತಿತ್ತು. ಅಂದರೆ ಅಪಸ್ವರ ಬರುತ್ತಿತ್ತು. ಶಾರೀರ ಸರಿಯಾಗಿ ನಿಲ್ಲುತ್ತಿರಲಿಲ್ಲ. ನಮ್ಮ ಅಪ್ಪಾಜಿಯವರೇ ಯಾವಾಗಲೂ 'ಕಳ್ಳ ಶಾರೀರದಲ್ಲಿ ಹಾಡಬಾರದು' ಅಂತ ಹೇಳುತ್ತಲೇ ಇದ್ದರು. ಧ್ವನಿ ಯಾವಾಗಲೂ ನಾಭಿಯಿಂದ ಬರಬೇಕು ಅಂತ ಬಹಳ ಚೆನ್ನಾಗಿ ಹೇಳೋರು ನಮ್ಮ ಅಪ್ಪಾಜಿ, ನಮಗೆ ಅಭ್ಯಾಸ ಆಗಿದ್ದುದೂ ಹಾಗೇ. ಆದರೆ ಅದೇನಾಯಿತೋ ನನಗೆ ಗೊತ್ತಿಲ್ಲ. 2-3 ತಿಂಗಳಿಂದ ಶಾರೀರ ಇದ್ದಕ್ಕಿದ್ದ ಹಾಗೆ ಅಪಶ್ರುತಿ ನುಡಿಯೋದು. ಇದು ಏತಕ್ಕೆ ಆಯಿತು ಅಂತ ನಮ್ಮ ಅಪ್ಪಾಜಿ ಯಾರೋ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿ ತೋರಿಸಿದರು. ಅದು ಏನೇನೋ ಟ್ಯಾಬ್ಲೆಟ್ ಗೀಬ್ಲೆಟ್‌ನ್ನೆಲ್ಲಾ ಕೊಡಿಸಿ ನೋಡಿದರು. ಆದರೂ ಸರಿಹೋಗಲಿಲ್ಲ. ರಿಹರ್ಸಲ್‌ನಲ್ಲಿ ನನ್ನ ಕೈಲೇ ಹಾಡಿಸಿದರು. ಮುನಿಯಪ್ಪನೋರು ಅಂತ ಎಂಪೈರ್ ಸ್ಟುಡಿಯೋ ಓನರ್ ಅವರು, ಡೈಲಿ ಪ್ರಾಕ್ಟೀಸ್‌ಗೆ ಬರೋರು. ಅವರು ಚೀಫ್ ಡೈರಕ್ಟರ್ ಆವಾಗ, ಆ ನಾಟಕದ ಕಂಪನಿಯಲ್ಲಿ ಅವರು ನನ್ನ ಕೈಲೇ ಹಾಡಿಸಿದರು. 'ಏನಯ್ಯಾ ಹೀಗೆ ಹಾಡುತ್ತಿದ್ದೀಯಾ? ಯಾಕಯ್ಯಾ ಶಾರೀರ ಹೀಗಿದೆ?' ಎಂದು ರೇಗಿದರು. ಆದರೆ ಬೇರೆ ಯಾರೂ ಆ ಪಾರ್ಟ್‌ಗೆ ಇರಲಿಲ್ಲ. ಆವಾಗ, ಆ ಪಾರ್ಟ್ ನಾನೇ ಮಾಡಬೇಕಾಗಿ ಬಂತು. ಸರಿ, ನಾಟಕದ ದಿವಸ ಏನು ಆಯಿತೋ ಏನು ಕತೆಯೋ ಗೊತ್ತಿಲ್ಲ! ಹಾಡು ಗೀಡು ಆದರೆ ಪರವಾಗಿಲ್ಲ. ಭಗವದ್ಗೀತೆ ಸೀನ್ ಬಂದಾಗ ಅದರ ಕಂದಪದ್ಯಗಳನ್ನು ಹಾಡಬೇಕಾದರೆ ಸ್ವಲ್ಪ ಚೆನ್ನಾಗಿ ಹಾಡಬೇಕಲ್ಲಾ! ಹಾಡುವುದಕ್ಕೆ ಪ್ರಾರಂಭ ಮಾಡಿದೆ. ಪ್ರಾರಂಭದಲ್ಲಿ ಕಂಠ ಸ್ವಲ್ಪ ಹಿಡಿಯೋದು, ಆಮೇಲೆ ಆಮೇಲೆ ಮಾಮೂಲಿ ಶಾರೀರ ಹೇಗಿತ್ತೋ ಹಾಗೆ ಹಾಡಿದೆ. ಸಾಧಾರಣವಾಗಿ ಆ ನಾಟಕದಲ್ಲಿ ಈ ಸೀನ್ ಬಂದರೆ ಜನಕ್ಕೆ ಸ್ವಲ್ಪ ಬೇಸರ ಆಗೋದು, ಬರೀ ಏಳೆತ, ಸಂಸ್ಕೃತ ಶ್ಲೋಕಗಳು, ಕೃಷ್ಣ ಹಾಡೋದು, ಅರ್ಜುನ ಹಾಡೋದು, ಕೃಷ್ಣ ಹಾಡೋದು, ಅರ್ಜುನ ಹಾಡೋದು, ಇಷ್ಟಕ್ಕೆ ಸುಮಾರು ಅರ್ಧ-ಮುಕ್ಕಾಲು ಗಂಟೆ ಸಮಯವಾಯ್ತು. ಅದೊಂದು ಸೀನ್ ಮುಗಿಯೋ ಹೊತ್ತಿಗೆ ನನ್ನ ವಾಯ್ಸ್ ಪೂರ್ತಿ ಚೇಂಜ್ ಆಗಿಹೋಯ್ತು! ಭರ್ಜರಿಯಾಗೋಯ್ತು! 'ಒನ್ಸ್ ಮೋರ್' ಅಂತ ಜನ ಕೂಗೋದಕ್ಕೆ ಶುರು ಮಾಡಿದರು. ಇದನ್ನು ಅಪ್ಪಾಜಿಯ ಮುಂದೆ ಹೇಳಿದೆ. ಅವರು ಒಂದು ಮಾತು ಹೇಳಿದರು, 'ಬಡ್ಡಿ ಮಗನೆ, ಇದು ನಿಂದಲ್ಲ, ಆಂಜನೇಯನ ವರ ಕಣೋ. ಆಂಜನೇಯ ಬಂದು ಹಾಡಿರೋದು. ಅವನ ವರದಲ್ಲಿ ನೀನು ಹುಟ್ಟಿರೋನು. ಆದ್ದರಿಂದ ಅವನು ಹೇಗೆ ನಿನ್ನ ಕೈ ಬಿಡ್ತಾನೆ? ನಾನು ಹೆದರಿಕೊಂಡು ಬಿಟ್ಟಿದ್ದೆ. ನನ್ನ ಮಗನಿಗೆ ಏನು ಗತಿಯಪ್ಪ? ಯಾರಾದ್ರೂ ಏನಾದ್ರೂ ಮಾಡಿಬಿಡ್ತಾರೇನೋ ಅಂತ ಭಯ ಪಟ್ಟಿದ್ದೆ

**ಅಭಿನಯ ಮತ್ತು ಕಲೆಯ ಬಗ್ಗೆ ರಾಜ್‌ಕುಮಾರ್ ಮಾತುಗಳು**